## ಮಂಗಳ ಗೌರಿಗೆ ಮಂಗಳ ಹಾಡಿ

ಕಲರ್ಸ್ ಕನ್ನಡದ 'ಮಂಗಳ ಗೌರಿ ಮದುವೆ' ಹಿಂದಿನ 'ಪುಟ್ಟ ಗೌರಿ ಮದುವೆ'ಯನ್ನು ಬಲವಂತವಾಗಿ ಮುಂದುವರಿಸಿದ ಕಥೆ. ಹಳೆಯ ಪುಟ್ಟ ಗೌರಿ ಕಥೆ ಸಹಿಸಲು ಅಸಾಧ್ಯವಾಗಿ ನಿಲ್ಲಿಸಿದರೆ ಸಾಕು ಎನ್ನಿಸುತ್ತಿದ್ದ ಸಂದರ್ಭದಲ್ಲಿ ಅದು ಈ ರೀತಿ ಮುಂದುವರಿಯಿತು.

ಹೆಚ್ಚಾದರೆ ಅಮೃತವೂ ವಿಷ ಎನ್ನುವಂತೆ, ಮಂಗಳ ಗೌರಿಯನ್ನು ಇನ್ನು ಸಹಿಸಲು ಅಸಾಧ್ಯವಾಗಿದೆ. ನಾವು ಇನ್ನೂ ಇದನ್ನು ನೋಡಲಾರೆವು. ನಿರ್ದೇಶಕರಿಗೂ ಇದನ್ನು ಹೇಗೆ ಮುಂದುವರಿಸಬೇಕೆಂದು ತಿಳಿಯುತ್ತಿಲ್ಲ ಎಂದೆನಿಸುತ್ತಿದೆ. ಹಾಗಾಗಿ ವಾಹಿನಿಯ ಮುಖ್ಯಸ್ಥರೆ ದಯಮಾಡಿ ಅವರಿಗೆ ಸಹಾಯ ಮಾಡಿ ಇದನ್ನು ಇಲ್ಲಿಗೇ ನಿಲ್ಲಿಸಿ ಪುಣ್ಯ ಕಟ್ಟಿಕೊಳ್ಳಿ.

ಪ್ರೈಮ್ ಟೈಮಿನಲ್ಲಿ ಮನೆ ಮಂದಿಯೆಲ್ಲಾ ಕುಳಿತು ನೋಡಬಹುದಾದ ಯಾವುದಾದರೂ ಒಳ್ಳೆಯ ಕಥೆ ಇದ್ದರೆ ಮಾತ್ರ ಪ್ರಸಾರ ಮಾಡಿ. 'ಮೂರುಗಂಟು' ಧಾರಾವಾಹಿಯನ್ನು ಸುಖಾಂತ್ಯಗೊಳಿಸಿ ಪ್ರಸಾರ ನಿಲ್ಲಿಸಿದ ವಾಹಿನಿಗೆ ನಮ್ಮ ಕೃತಜ್ಞತೆಗಳು. ನನ್ನ ಬಂಧುಗಳು, ಸ್ನೇಹಿತರ ಪರವಾಗಿ ಈ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

—ಗಾಯತ್ರಿ ಮೂರ್ತಿ

## ವಾಹಿನಿಗಳ ಕನ್ನಡ ಪ್ರೇಮ

'ಅಪ್ಪಟ ಕನ್ನಡ ವಾಹಿನಿಗಳು' ಎಂಬ ಶೀರ್ಷಿಕೆ ಹೊತ್ತ ಮುಖ್ಯ ವಾಹಿನಿಗಳು 4 ತಿಂಗಳ ಹಿಂದಿನಿಂದ ತೆಲುಗು ಮತ್ತು ತಮಿಳು ಸಿನಿಮಾಗಳನ್ನು ಕನ್ನಡಕ್ಕೆ ಡಬ್ ಮಾಡಿ ಪ್ರಸಾರ ಮಾಡುವ ಕೆಟ್ಟ ಚಾಳಿ ಶುರು ಮಾಡಿಕೊಂಡಿವೆ. ಮೂಲ ಚಿತ್ರದ ಹೆಸರಿನ ಜೊತೆಗೆ ಸಂಭಾಷಣೆ , ಹಾಡುಗಳನ್ನು ಸಹ ಅತ್ಯಂತ ಕೆಟ್ಟದಾಗಿ ಬಳಸಿ ಮೂಲ ಕನ್ನಡದ ಭಾಷೆ ಮತ್ತು ಸಂಸ್ಕೃತಿಗೆ ಮಾರಕವನ್ನು ತಂದು ಒಡ್ಡುತ್ತಿದ್ದಾರೆ.

ಅಲ್ಲೆಲ್ಲೋ ಯಶಸ್ವಿಯಾಗಿ ಪ್ರದರ್ಶನ ಕಂಡ ತೆಲುಗು ಮತ್ತು ತಮಿಳು ಸಿನಿಮಾಗಳನ್ನು ಭಟ್ಟಿ ಇಳಿಸಿ ಪ್ರಸಾರ ಮಾಡುವ ರೀತಿಯನ್ನು ನೋಡಿದರೆ ಮುಂದೆ ಕನ್ನಡ ಸಿನಿಮಾಗಳನ್ನು ಇವರು ಯಾವ ರೀತಿ ಪ್ರೋತ್ಸಾಹಿಸುತ್ತಾರೆ ಎಂಬುದೇ ಭಯಾನಕ. ವರ್ಷಗಳ ಹಿಂದಿನ ತೆಲುಗಿನ 'ಬಾಹುಬಲಿ' ತಮಿಳಿನ 'ವೀರಬೇಟೆಗಾರ', ಹೀಗೆ ಸಾಕಷ್ಟು ಸಿನಿಮಾಗಳು ದೀಪಾವಳಿ ಹಬ್ಬದ ದಿನಗಳಲ್ಲಿ ಭರ್ಜರಿ ಜಾಹೀರಾತುಗಳ ಸಮೇತ ಪ್ರಸಾರ ಮಾಡಿದ ರೀತಿಯನ್ನು ನೋಡಿದರೆ ನಮ್ಮ ಕನ್ನಡ ಚಿತ್ರಗಳ ಸ್ಥಿತಿ ಅಧೋಗತಿಗೆ ಇಳಿಯುತ್ತಿದೆ ಎಂದು ಖಾತ್ರಿಯಾಗಿ ಹೋಯ್ತು.

ಏನೇ ಪ್ರಸಾರ ಮಾಡಿದರೂ ನೋಡಿಯೇ ನೋಡ್ತಾರೆ ಅನ್ನೋ ಅಸಡ್ಡೆ ಅಷ್ಟೇ! ಇನ್ನು ವಾರಾಂತ್ಯದ ವಿಶೇಷ ಅಂತಾ ಪ್ರಸಾರ ಮಾಡುವ 'ಆ ಕುಟುಂಬ ಅವಾರ್ಡ್ಸ್', 'ಮಹಾಸಂಗಮ', 'ಸಜಾ ಟಾಕೀಸ್' ಹೀಗೇ ಮುಂತಾದ ಸ್ವಯಂ ಪ್ರಚಾರ ಕಾರ್ಯಕ್ರಮ ಆಯೋಜಿಸಿಕೊಂಡು ಅಲ್ಲಿ ಇಂಗ್ಲಿಷ್ ಮೆರೆಸುತ್ತಾರೆ. ನಮ್ಮ ಕನ್ನಡ ಚಂದನ ವಾಹಿನಿಯಲ್ಲಿಯೂ ಕೆಲವು ಕಾರ್ಯಕ್ರಮ ಕಳಪೆಯಿಂದ ಕೂಡಿವೆ. ಕೆಲವು ಸಿನಿಮಾಗಳ ಆಯ್ಕೆಯಲ್ಲಿಯೂ ಎಡವಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಸರಿಗನ್ನಡ ಒಂದಿದ್ದರೆ ಸಾಕೆ?

ಕಲರ್ಸ್ ಕನ್ನಡದ 'ಕನ್ನಡತಿ' ಕೊನೆಯಲ್ಲಿ ಬರುವ ಕನ್ನಡ ಪದಗಳ ಸರಿಗನ್ನಡಂ ಗೆಲ್ಗೆ ಬಿಟ್ಟರೆ ಈ ಧಾರಾವಾಹಿ ಕೂಡ ಅಸಂಬದ್ಧ ಕಥಾಹಂದರದಿಂದ ತುಂಬಿದೆ. ಕಥಾನಾಯಕ ಹರ್ಷನ ಪಿಸ್ತೂಲು ವಿಲೇವಾರಿ ಬೀದಿ ಬದಿಯಲ್ಲಿ ಕೊತ್ತಂಬರಿ ಸೊಪ್ಪು ಖರೀದಿ ಮಾಡುವ ಹಾಗೆ ರಸ್ತೆಯಲ್ಲಿ ವಿಲೇವಾರಿ ಆಯಿತು. ಸಾನಿಯಾ ತನ್ನ ಸ್ವಂತ ಸೊಸೆ ಅಲ್ಲದಿದ್ದರೂ, ಮನೆಯವರೆಲ್ಲರ ಜೊತೆ ದುರ್ವರ್ತನೆ ತೋರಿದರೂ ರತ್ನಮಾಲಾ ಅವರು ಸುಮ್ಮನಿರುವುದು, ಅಧಿಕಾರಕ್ಕಾಗಿ, ಆಸ್ತಿಗಾಗಿ ಮುಕ್ತವಾಗಿ ಅತ್ತೆಯ ಹತ್ತಿರ ಪಟ್ಟು ಹಿಡಿದರೂ ಅದನ್ನ ಸದಾ ಹಸನ್ಮುಖಿಯಾಗಿ ನೋಡುತ್ತಾ ಕುಳಿತುಕೊಳ್ಳುವ ರತ್ನಮಾಲಾ, ಸೊಸೆಯ ಉದ್ಧಟತನಕ್ಕೆ ಕಡಿವಾಣ ಹಾಕಲು ಆಗದವರು ಒಂದು ಉದ್ಯಮವನ್ನು ಹೇಗೆ ನಡೆಸುವರು ಎಂಬ ಸಂದೇಹ ಬರುತ್ತದೆ. ಸಾನಿಯಾ ತನ್ನ ಅತ್ತೆ ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ತಾನೇ ಮನೆ ಒಡತಿಯಂತೆ ತನ್ನ ತಾಯಿಯನ್ನು ಅತ್ತೆ ಮನೆಗೆ ಕರೆ ತಂದು ಅಧಿಕಾರಯುತವಾಗಿ ತನ್ನ ಜೊತೆ ಇರಿಸಿಕೊಳ್ಳುವುದು, ಇದೆಲ್ಲ ಬಹಳವೇ ಅಸಹಜವಾಗಿದೆ.

ಪ್ರೀತಿಪಾತ್ರನಾದ ಸ್ವಂತ ಮಗನ ಮೇಲೆ ಸಾನಿಯಾನಿಂದ ಜೀವ ಬೆದರಿಕೆ ಇದೆ ಎಂದು ತಿಳಿದರೂ ಸಾನಿಯಾಗೆ ಎಚ್ಚರಿಕೆ ನೀಡಿ ಕಡಿವಾಣ ಹಾಕುವ ಬದಲು ಮಗನಿಗೆ ಬೈದು ತಿಳಿ ಹೇಳುವುದು ಯಾವುದೇ ತಾಯಿಯಿಂದ ನಿರೀಕ್ಷಿಸುವುದು ಅಸಾಧ್ಯ. ಇನ್ನು ಸಾನಿಯಾಳ ಗಂಡನಿಗೆ ಅಬ್ಬೇಪಾರಿಯಂತೆ ಆ ಕೋಣೆಯಿಂದ ಈ ಕೋಣೆಗೆ ಓಡಾಡುವುದೇ ದೊಡ್ಡ ಉದ್ಯೋಗವಾಗಿರುವ ಹಾಗಿದೆ.

ವಾಸ್ತವಿಕತೆಗೆ ಹತ್ತಿರವಾದ ಒಳ್ಳೆಯ ಕಥಾ ಹಂದರ ಇದ್ದರೆ ಈ ಧಾರಾವಾಹಿ ಇನ್ನಷ್ಟು ಪ್ರೇಕ್ಷಕ ವರ್ಗವನ್ನು ಸೆಳೆಯಬಹುದು. ಬರೀ ಸರಿಗನ್ನಡಕ್ಕಾಗಿ ಇದನ್ನೆಲ್ಲಾ ಸಹಿಸಲು ಕಷ್ಟಕರವಾಗುತ್ತದೆ.

—ವೀಣಾ ಮಂಜಪ್ಪ, ಬೆಂಗಳೂರು

## ಮಹಾಸಂಗಮದ ನಗೆಹೊಳೆ

ಸರಿಗಮಪ ಹಾಗೂ ಕಾಮಿಡಿ ಕಿಲಾಡಿಗಳ ಮಹಾಸಂಗಮ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂತು. ಕೊರೊನ, ಲಾಕ್‌ಡೌನ್‌ನಿಂದ ಉಂಟಾದ ಬೇಸರದಿಂದ ನಗುವುದನ್ನೆ ಮರೆತಿದ್ದೆವು. ಕಾಮಿಡಿ ಕಿಲಾಡಿಗಳು ಬಹಳ ಚೆನ್ನಾಗಿ ಸರಿಗಮಪ ಸ್ಪರ್ಧಿಗಳ ಅನುಕರಣೆಯನ್ನು ಅಭಿನಯಿಸಿ, ಎಲ್ಲರನ್ನೂ ಹೊಟ್ಟೆ ಹುಣ್ಣಾಗುವಂತೆ ನಗಿಸಿ ರಂಜಿಸಿದರು. ಹಾಗೆ ಮನಸ್ಸು ಬಿಚ್ಚಿ ನಕ್ಕು ಅನೇಕ ದಿನಗಳಾಗಿತ್ತು. ಅದಕ್ಕಾಗಿ ಎಲ್ಲರಿಗೂ ಧನ್ಯವಾದಗಳು.

—ಕೆ.ಎಸ್. ಸವಿತ, ಬೆಂಗಳೂರು

## ಕುತ್ತಿಗೆ ಹಿಸುಕಿದ ಅನುಭವ

ಕನ್ನಡ ಕಲರ್ಸ್‌ನ 'ನನ್ನರಸಿ ರಾಧೆ' ನೋಡುತ್ತಿದ್ದರೆ ಟೀವಿ ಒಡೆದುಹಾಕುವಷ್ಟು ಕೋಪ ಬರುತ್ತದೆ. ವೀಕ್ಷಕರನ್ನು ಏನೆಂದು ತಿಳಿದುಕೊಂಡಿದ್ದಾರೆ ಎಂದು ಅರ್ಥವೇ ಆಗುತ್ತಿಲ್ಲ. ಅಮ್ಮ ಅನ್ನಿಸಿಕೊಂಡವಳು ಮಗಳ ತಾಳಿ ತೆಗೆಯುವಾಗ ಆಚೆ ಬಂದು ಕುಳಿತಿರುತ್ತಾಳೆ. ಅಲ್ಲಿ ನರರಾಕ್ಷಸಿಯಂತಹ ಅವಳ ಅತ್ತಿಗೆ ಎನ್ನಿಸಿಕೊಂಡವಳು ಇಂಚರಳ ತಾಳಿ ತೆಗೆಯುವ ಉತ್ಸಾಹದಲ್ಲಿ ಇರುತ್ತಾಳೆ. ಅದನ್ನು ಇಂಚರ ಪ್ರತಿಭಟಿಸುವುದನ್ನು ಬಿಟ್ಟು ಅಳುತ್ತಾ ಕುಳಿತಿರುತ್ತಾಳೆ. ಇನ್ನು ಗಂಡಸು ಅನ್ನಿಸಿಕೊಂಡ ಕೆಲವರು ತಮ್ಮ ತಮ್ಮ ಹೆಂಡತಿಯರನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಇಷ್ಟೆಲ್ಲ ಆಗುತ್ತಿರುವುದು ಅಗಸ್ತ್ಯನ ತಾಯಿ ಯಾರು ಎಂದು ತಿಳಿದುಕೊಳ್ಳುವುದಕ್ಕಾಗಿ ಆದಷ್ಟು ಬೇಗ ಈ ವಿಷಯ ಇತ್ಯರ್ ವಾಗಿ ಧಾರಾವಾಹಿ ಮುಗಿಸಿದರೆ ವೀಕ್ಷಕರು ಧನ್ಯ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಅಪರೂಪದ ಪುಸ್ತಕ ಪ್ರೇಮಿ

ಟಿ.ವಿ೫ ರಲ್ಲಿ ಪಾಂಡವಪುರದ ಅಂಕೇಗೌಡರ ಸಂದರ್ಶನ ವಿಶೇಷವಾಗಿತ್ತು. ಸುಮಾರು ನಲ್ವತ್ತು ವರ್ಷಗಳಿಂದ ಪುಸ್ತಕಗಳನ್ನು ಸಂಗ್ರಹಿಸಿರುವ ಅವರ ಸಂಗ್ರಹದಲ್ಲಿ ಹದಿನೈದು ಲಕ್ಷಕ್ಕೂ ಅಧಿಕ ಪುಸ್ತಕಗಳಿವೆ. ಯಾರ ಸಹಾಯವಿಲ್ಲದೆ, ಸಂಗ್ರಹದಲ್ಲಿರುವ ಪುಸ್ತಕಗಳಿಗೆ ಸೂಕ್ತ ರಕ್ಷಣೆ ಇಲ್ಲದಂತಾಗಿದೆ. ಅವುಗಳನ್ನು ಇಟ್ಟಿರುವ ಸ್ಥಿತಿ ಪುಸ್ತಕ ಪ್ರೇಮಿಗಳಿಗೆ ನೋವೆನಿಸುತ್ತದೆ. ಸಂಗ್ರಹಿಸಿರುವ ಅದ್ಭುತ ಗ್ರಂಥಭಂಡಾರವನ್ನು ಮುಂದಿನ ತಲೆಮಾರಿಗೆ ದಾಟಿಸಲು ಸರ್ಕಾರವೂ ಮುಂದಾಗಬೇಕು. ಅಂಕೇಗೌಡರ ಈ ಕಾರ್ಯಕ್ಕೆ ಪ್ರೋತ್ಸಾಹವನ್ನು ನೀಡಬೇಕು. ಟಿ.ವಿ೫ ರಲ್ಲಿ ಪ್ರಸಾರವಾದ ಕಾರ್ಯಕ್ರಮ ಸರ್ಕಾರದ ನಿರ್ಲಕ್ಷ್ಯಕ್ಕೆ ನಿದರ್ಶನ.

—ಸಿಹಿಮೊಗೆ ರಮೇಶ್, ಮೈಸೂರು